**ಕರ್ನಾಟಕ ಸರ್ಕಾರ ನಡವಳಿಗಳು**

**ವಿಷಯ** : ಕೃಷಿ ಮಾರಾಟ ಇಲಾಖೆಯಲ್ಲಿ ಆಂತರಿಕ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಕೋಶವನ್ನು (Internal PPP Cell) ರಚಿಸುವ ಬಗ್ಗೆ.

**ಓದಲಾಗಿದೆ** : 1. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಪ್ರಸ್ತಾವನೆ ಸಂಖ್ಯೆ: ಕೃಮಾಇ/ಯೋಜನೆ/ಇತರೆ/34/2021, ದಿನಾಂಕ: 28.09.2021

2. ಸರ್ಕಾರದ ಆದೇಶ ಸಂಖ್ಯೆ:ಸಇ 100 ಎಂಆರ್‌ಇ 2013, ದಿನಾಂಕ:20.09.2013

*****

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪ್ರಸ್ತಾವನೆಯಲ್ಲಿ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರು ಕೃಷಿ ಮಾರಾಟ ಇಲಾಖೆಯಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ದೀರ್ಘಕಾಲಿಕ ಯೋಜನೆಗಳನ್ನು ರೂಪಿಸಲಾಗುತ್ತಿದ್ದು, ಈ ಯೋಜನೆಗಳ ಪರಿಕಲ್ಪನಾ ಹಂತದಿಂದ ಮುಕ್ತಾಯದ ಹಂತದವರೆಗೆ ಧನಾತ್ಮಕ ಪರಿಣಾಮಕ್ಕೆ ಯೋಜನೆಯ ರೂಪುರೇಷೆಯಿಂದ ಮುಕ್ತಾಯದವರೆಗೆ ಕಾಲಾನುಸಾರ ಮಾರ್ಗದರ್ಶನ, ಸಮನ್ವಯ, ಅನುಮೋದನೆ, ಮೇಲ್ವಿಚಾರಣೆ, ಸಮಸ್ಯೆಗಳ ಪರಿಹಾರ, ವರದಿ ಮಾಡುವ ಕಾರ್ಯವಿಧಾನ ಮುಂತಾದ ಕ್ರಮಗಳಿಗೆ ಒಂದು ಪ್ರತ್ಯೇಕ ತಂಡದ ಅಗತ್ಯವಿರುವುದರಿಂದ ಆಂತರಿಕ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಕೋಶವನ್ನು (Internal PPP Cell) ರಚಿಸಿ, ಜವಾಬ್ದಾರಿಗಳನ್ನು ನಿಗದಿಪಡಿಸುವಂತೆ ಕೋರಿದ್ದು, ಸದರಿ ಕೋಶದಲ್ಲಿರಬೇಕಾದ ಅಧಿಕಾರಿ/ನೌಕರರು ಮತ್ತು ನಿರ್ವಹಿಸಬೇಕಾದ ಜವಾಬ್ದಾರಿಗಳ ವಿವರಗಳನ್ನು ಸಲ್ಲಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶದಲ್ಲಿ, ಕೃಷಿ ಮಾರಾಟ ಇಲಾಖೆಯಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಕೋಶವನ್ನು ರಚಿಸಲಾಗಿದೆ.

ನಿರ್ದೇಶಕರ ಪ್ರಸ್ತಾವನೆ ಮತ್ತು ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದ ಸರ್ಕಾರವು, ಕೃಷಿ ಮಾರಾಟ ಇಲಾಖೆಯಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಸರ್ಕಾರದ ಆದೇಶ ಸಂಖ್ಯೆ:ಸಇ 100 ಎಂಆರ್‌ಇ 2013, ದಿನಾಂಕ:20.09.2013ರಲ್ಲಿ ರಚಿಸಲಾಗಿರುವ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಕೋಶವನ್ನು ಪರಿಷ್ಕರಿಸಿ ಆಂತರಿಕ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಕೋಶವನ್ನು (Internal PPP Cell) ರಚಿಸಿ, ಸದರಿ ಕೋಶವು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ನಿಗದಿಪಡಿಸಲು ನಿರ್ಧರಿಸಿದೆ. ಅದರಂತೆ, ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ: ಸಇ 280 ಎಂಆರ್‌ಇ 2021/ಇ.ಆ.
## ಬೆಂಗಳೂರು, ದಿನಾಂಕ:18.10.2021.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ:ಸಇ 100 ಎಂಆರ್‌ಇ 2013, ದಿನಾಂಕ:20.09.2013ರಲ್ಲಿ ರಚಿಸಲಾಗಿರುವ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಕೋಶವನ್ನು ಪರಿಷ್ಕರಿಸಿ, ಕೃಷಿ ಮಾರಾಟ ಇಲಾಖೆಯಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಯೋಜನೆಗಳನ್ನು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಲು ಈ ಕೆಳಕಂಡಂತೆ ಆಂತರಿಕ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಕೋಶವನ್ನು (Internal PPP Cell) ರಚಿಸಿ, ಸದರಿ ಕೋಶವು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ನಿಗದಿಪಡಿಸಿ ಆದೇಶಿಸಿದೆ.

| ಕ್ರ.ಸಂ. | ಅಧಿಕಾರಿ/ಸಿಬ್ಬಂದಿಯ ವಿವರ | IPPP ಕೋಶದಲ್ಲಿನ ಸ್ಥಾನ |
|---|---|---|
| 1. | ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು | ಅಧ್ಯಕ್ಷರು |
| 2. | ಹೆಚ್ಚುವರಿ ನಿರ್ದೇಶಕರು (ಆಡಳಿತ), ಕೃಷಿ ಮಾಡಾಟ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು | ಸದಸ್ಯರು |
| 3. | ಹೆಚ್ಚುವರಿ/ಜಂಟಿ ನಿರ್ದೇಶಕರು (ಯೋಜನೆ), ಕೃಷಿ ಮಾರಾಟ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು | ಸದಸ್ಯರು |
| 4 | ತಾಂತ್ರಿಕ ಸಹಾಯಕರು, ಮಾರುಕಟ್ಟೆ ಅಭಿವೃದ್ಧಿ ಯೋಜನೆ, ಕೃಷಿ ಮಾರಾಟ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು. | ಸದಸ್ಯ ಕಾರ್ಯದರ್ಶಿ ಹಾಗೂ ನೋಡಲ್ ಅಧಿಕಾರಿ |
| 5. | ಅಧೀಕ್ಷಕರು, ಯೋಜನಾ ವಿಭಾಗ, ಕೃಷಿ ಮಾರಾಟ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು. | ಸಹ ಸದಸ್ಯ ಕಾರ್ಯದರ್ಶಿ |

**ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಕೋಶವು ನಿರ್ವಹಿಸಬೇಕಾದ ಜವಾಬ್ದಾರಿಗಳು;**

ಈ ಆಂತರಿಕ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಕೋಶದ ಕಾರ್ಯಚಟುವಟಿಕೆಗಳು ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ನೀತಿಯನ್ವಯ (PPP Policy) ಯೋಜನೆಯ ಅನುಷ್ಠಾನ ಸಂಸ್ಥೆಯೊಂದಿಗೆ ಯೋಜನೆಯ ಪರಿಕಲ್ಪನೆಯಿಂದ ಮುಕ್ತಾಯದವರೆಗೆ ಹಾಗೂ ವಿಷಯವಾರು ಪಾಲ್ಗೊಳ್ಳುವಿಕೆಯಿಂದ ನಿರ್ಧಾರ ತೆಗೆದುಕೊಳ್ಳುವ ಹಂತದವರೆಗು ಸಹ ಇದ್ದು, ಯೋಜನೆ/ಅನುಷ್ಠಾನ ಕುರಿತು ಆಡಳಿತ ಇಲಾಖೆಯ ಮುಖ್ಯಸ್ಥರಿಗೆ ಸೂಕ್ತ ಶಿಫಾರಸ್ಸನ್ನು ಮಾಡುವವರೆಗೆ ಪ್ರಮುಖವಾಗಿ ಈ ಕೆಳಗಿನ ಚಟುವಟಿಕೆ/ಜವಾಬ್ದಾರಿಗಳನ್ನು ನಿರ್ವಹಿಸತಕ್ಕದ್ದು.

1. ಸಾರ್ವಜನಿಕ-ಖಾಸಗಿ-ಸಹಭಾಗಿತ್ವದ (PPP) ಯೋಜನೆಗಳನ್ನು ಗುರುತಿಸಿ ಪರಿಕಲ್ಪನೆ ರೂಪಿಸುವುದು ಮತ್ತು ಕೃಷಿ ಮಾರಾಟ ಇಲಾಖೆಯ List of pipeline PPP projects ಸಿದ್ಧಪಡಿಸುವುದು.
2. ಸಂಬಂಧಪಟ್ಟ ಭಾಗೀದಾರರೊಂದಿಗೆ (Stake Holders) ಸಮಾಲೋಚಿಸಿ, ಯೋಜನೆಗಳನ್ನು ಅಭಿವೃದ್ಧಿಪಡಿಸುವುದು.
3. ಸಾರ್ವಜನಿಕ-ಖಾಸಗಿ-ಸಹಭಾಗಿತ್ವ (PPP) ಯೋಜನೆಗಳಿಗೆ ಸಲಹೆಗಾರರನ್ನು ಆಯ್ಕೆ ಮಾಡುವುದು.
4. ಸಲಹೆಗಾರರು ಸಿದ್ಧಪಡಿಸಿದ ಪರಿಕಲ್ಪನೆ, ಸಂಗ್ರಹಣೆ, ಆಂತರಿಕ ಮೌಲ್ಯಮಾಪನ ಮಾರ್ಗಸೂಚಿಗಳನ್ನು ನಿಯಮಾನುಸಾರ ಅಭಿವೃದ್ಧಿಪಡಿಸುವುದು ಹಾಗೂ ಮೌಲ್ಯಮಾಪನ ಮಾಡುವುದು.
5. ವಸ್ತುನಿಷ್ಠ ವಿಶ್ಲೇಷಣೆ ಆಧಾರದ ಮೇಲೆ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ (PPP) ಯೋಜನೆಗಳಿಗೆ ಅಗತ್ಯವಿರುವ ಎಲ್ಲಾ ಸಕಾಲಿಕ ಅನುಮೋದನೆಗಳನ್ನು ಪಡೆಯಲು ನಿಯಮಾನುಸಾರ ಕ್ರಮ ಕೈಗೊಳ್ಳುವುದು.
6. ಭಾರತ ಸರ್ಕಾರ/ರಾಜ್ಯ ಸರ್ಕಾರದ ಇತರ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ (PPP) ಕೋಶಗಳೊಂದಿಗೆ ಸಂವಹನ ನಡೆಸುವುದು.
7. ಅನುಷ್ಠಾನದಲ್ಲಿರುವ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ (PPP) ಯೋಜನೆಗಳನ್ನು ಪರಿಶೀಲಿಸಿ ಯೋಜನೆಯ ಮುಕ್ತಾಯದವರೆಗೆ ನಿರಂತರ ಮೇಲ್ವಿಚಾರಣೆ ಮಾಡುವುದು.
8. ಇಲಾಖೆಯ ಇತರೆ ಅಧಿಕಾರಿಗಳಿಗೆ ಪಿಪಿಪಿಯ ಯೋಜನೆಗಳ ಸಾಮರ್ಥ್ಯ ಅಭಿವೃದ್ಧಿ ತರಬೇತಿಗಳ ಆಯೋಜನೆ/ನಿಯೋಜನೆ ಮಾಡುವುದು.
9. ಕಾಲಕಾಲಕ್ಕೆ ಸ್ಥಳ ಪರಿವೀಕ್ಷಣೆ, ಯೋಜನೆಯ ಮೇಲ್ವಿಚಾರಣೆ, ಸಕಾಲಿಕ ಪರಿಶೀಲನೆ, Claims Review and Concession issues ಇತ್ಯಾದಿ ಅಂಶಗಳ ಕುರಿತು ಕ್ರಮವಹಿಸುವುದು.
10. ಆಂತರಿಕ ಪಿಪಿಪಿ ಕೋಶಕ್ಕೆ ಅವಶ್ಯಕತೆಯ ಮೇರೆಗೆ ತಜ್ಞರು/ಸಲಹೆಗಾರರನ್ನು ಸದಸ್ಯರನ್ನಾಗಿ ನೇಮಿಸಿ ಆಹ್ವಾನಿಸಿಕೊಳ್ಳಬಹುದು.

ಈ ಅಧಿಕಾರಿ/ಸಿಬ್ಬಂದಿಗಳು ಹಾಲಿ ನಿರ್ವಹಿಸುತ್ತಿರುವ ಜವಾಬ್ದಾರಿಗಳ ಜೊತೆಗೆ ಹೆಚ್ಚುವರಿಯಾಗಿ ಆಂತರಿಕ ಸಾರ್ವಜನಿಕ-ಖಾಸಗಿ-ಸಹಭಾಗಿತ್ವ ಕೋಶದ ಜವಾಬ್ದಾರಿಗಳನ್ನು ನಿರ್ವಹಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಬಿ.ಎಸ್. ಮಂಜುನಾಥ್)**
ಸರ್ಕಾರದ ಅಧೀನ ಕಾರ್ಯದರ್ಶಿ-1
ಸಹಕಾರ ಇಲಾಖೆ

ಇವರಿಗೆ :

1. ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು-560001.
2. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ನಂ.16, 2ನೇ ರಾಜಭವನ ರಸ್ತೆ, ಬೆಂಗಳೂರು.
3. ಸಂಬಂಧಪಟ್ಟ ಅಧಿಕಾರಿ/ನೌಕರರಿಗೆ (ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ಇವರ ಮುಖಾಂತರ)

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಹಕಾರ ಇಲಾಖೆ.
2. ಸರ್ಕಾರದ ಅಪರ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಸಹಕಾರ ಇಲಾಖೆ.